ಆಕ್ಟ್ ಕೆಳಗಡೆ ಶೆಲ್ಟರ್ ತೆಗೆದುಕೊಳ್ಳುತ್ತಿದ್ದಾರೆ, ಅದೂ ಕೂಡ ಸತ್ಯಕ್ಕೆ ದೂರವಾದ ವಿಚಾರವಾಗಿದೆ. ಅದಕ್ಕೆ ಯಾವ ಸಂಬಂಧ ಕೂಡ ಇಲ್ಲ. ಇನ್ನು ಮೂರನೆಯದಾಗಿ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ ಹಾಗೆ ಚುನಾವಣೆಗಳು ಬರುತ್ತವೆ, ಸಧ್ಯಕ್ಕೆ ತಲೆನೋವು ಏಕೆ ಎಂದು ಯಾವುದೇ ರೀತಿಯಿಂದ ಪೋಸ್ಟ್‌ಪೋನ್ ಮಾಡಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ ಹೊರತು ಡೆಮಾಕ್ರಟಿಕ್ ಪದ್ಧತಿ ಪ್ರಕಾರ ಪುನಃ ಚುನಾವಣೆ ಆಗಬೇಕು ಎನ್ನತಕ್ಕಂಥದ್ದಿಲ್ಲ. ನೀವೇನು ಮಾಡಿದಿರಿ ಎಂದರೆ 73rd,74th ಅಮೆಂಡ್‌ಮೆಂಟ್ ಬಂದಾಗ ಪಂಚಾಯತಿಗಳಿಗೆ ಮತ್ತು ಮುನಿಸಿಪಾಲಿಟಿಗಳಿಗೆ ಏನು ಹಕ್ಕು ಸಿಕ್ಕುತ್ತಿತ್ತೋ ಅದು 85 ಆಗಲಿ, 87 ಆಥವಾ 92 ಆಯ್ಕ್ಟ್‌ನಲ್ಲಿ ಅಷ್ಟೊಂದು ಅದಕ್ಕೆ ಇರಲಿಲ್ಲ. ಪದೇ ಪದೇ ನೀವು ಮಾತನಾಡುತ್ತ ನೀವು ಮಾಡಿದ್ದನ್ನು ನಾವು ಸರಿಪಡಿಸಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೀರಿ. ನೀವೇನು ಸರಿಪಡಿಸಿದ್ದೀರಿ? ಕಳೆದ 5 ವರ್ಷಗಳಿಂದ ನಿಮ್ಮ ಕೈಯಿಂದ ಯಾವುದನ್ನೂ ಸರಿಪಡಿಸುವುದಕ್ಕೆ ಆಗಲಿಲ್ಲ. ಈಗ ಇದನ್ನೂ ಕೂಡ ತಿರುಚು-ಮುರುಚು ಮಾಡಿ ಯಾವುದೋ ರೀತಿಯಿಂದ ಮುಂದಕ್ಕೆ ಹಾಕಿ ಪ್ರಜಾಪ್ರಭುತ್ವವನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದೀರಿ. ಈಗಾಗಲೇ ಈ ಬಗ್ಗೆ ಸಾಕಷ್ಟು ಉತ್ತರವನ್ನು ಕೇಳಿಯಾಗಿದೆ. ಇನ್ನು ಮುಂದೆ ಕೂಡ ಇದರ ಬಗ್ಗೆ ಅವರ ಉತ್ತರ ಕೇಳುವುದಕ್ಕೆ ನಾವು ತಯಾರಿಲ್ಲ. ಈಗೇನು ಇವರು ತಿದ್ದುಪಡಿ ತಂದು ಪಂಚಾಯತ್ ರಾಜ್ ಕೊಲೆಯನ್ನು ಮಾಡುತ್ತಿದ್ದಾರೋ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯಮಂತ್ರಿಗಳು) :— ವಿರೋಧ ಪಕ್ಷದ ನಾಯಕರು ಮಾತನಾಡಿ ಸರಿಪಡಿಸಲಿಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲವೆಂದರು. ಅದು ನಿಜ. ಅಂದರೆ ಕಾಂಗ್ರೆಸ್ ನವರನ್ನು ಸರಿಪಡಿಸಲಿಕ್ಕೆ ಆಗಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇನೋ ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡು ಚುನಾವಣೆಗಳನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು ಎನ್ನುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದಾರೆ ಎಂದು ಹೇಳಿದರು. ಆದರೆ ಐದಾರು ತಿಂಗಳ ಹಿಂದೆಯೇ ಚುನಾವಣೆಗಳನ್ನು ನಡೆಸುವುದಕ್ಕೆ ಇವರಿಗೆ ಅಧಿಕಾರವಿತ್ತಲ್ಲ. ಈಗ ಮತ್ತೆ ಏನು ಹೇಳುತ್ತಿದ್ದೀರೆಂದರೆ ಇನ್ನು 8 ತಿಂಗಳು ಇರುವಾಗ ಚುನಾವಣೆ ನಡೆಸುವುದಕ್ಕೆ ಆಗುವುದಿಲ್ಲವೆನ್ನುತ್ತೀರಿ. ಇದು ಯಾವ ನ್ಯಾಯ? ಈ ಹಿಂದೆ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ನಡೆದಿಲ್ಲವೆ? ಇಂಥ ಕಾನೂನನ್ನು ಇಂಥ ಚುನಾವಣೆಗೋಸ್ಕರ ಇಂಥ ದಿನಾಂಕದಿಂದ ಎಫೆಕ್ಟ್‌ಗೆ ತರುತ್ತೇವೆ ಎಂದು ಹೇಳಿ ಕಾನೂನು ಮಾಡುವುದಕ್ಕೆ ನಿಮಗೆ ಆಗುತ್ತಿರಲಿಲ್ಲವೆ? ನಿಮಗೆ ಮೊಟ್ಟಮೊದಲನೆಯದಾಗಿ ಚುನಾವಣೆ ನಡೆಸುವುದಕ್ಕೆ